OCTOBER 20, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಆಕಾಶವಾಣಿಯ, ನಮ್ಮ ಆತ್ಮೀಯ ಕೇಳುಗರಿಗೆಲ್ಲ, ನರಕ ಚತುರ್ದಶಿ ಹಾಗೂ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.

<><><>

ಮುಖ್ಯಾಂಶಗಳು:

<><><>

- ಸುದೃಢ ಆರೋಗ್ಯ ಹಾಗೂ ಪರಿಸರ ಜಾಗೃತಿ ಗುರಿಯೊಂದಿಗೆ, ಫಿಟ್ ಇಂಡಿಯಾ, ಸಂಡೇಸ್ ಆನ್ ಸೈಕಲ್, ಅಭಿಯಾನ.
- ಇಂದು ನರಕ ಚತುರ್ದಶಿ; ದೀಪಾವಳಿ ಸಂಭ್ರಮಾಚರಣೆಗೆ ಭರದ ಸಿದ್ಧತೆ; ಪಟಾಕಿ ಹಾರಿಸುವಾಗ, ಮುನ್ನೆಚ್ಚರಿಕೆಗೆ ಮನವಿ.
- ರಾಜ್ಯಕ್ಕೆ, 384 ಕೋಟಿ 40 ಲಕ್ಷ ರೂಪಾಯಿ, ಕೇಂದ್ರದಿಂದ, ಮುಂಗಡ ಬೆಳೆ ನಷ್ಟ ಪರಿಹಾರ.
- ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಕೇಂದ್ರದಿಂದ, ಸಾವಯವ ಕೃಷಿಗೆ ಒತ್ತು.

<><><>

ಈಗ ವಾರ್ತೆಗಳ ವಿವರ

<><><>

ಮೂರನೇ ಭಾನುವಾರದ, 'ಫಿಟ್ ಇಂಡಿಯಾ, ಸಂಡೇಸ್ ಆನ್ ಸೈಕಲ್' ಆಂದೋಲನದ, ಮುಂದುವರಿದ ಭಾಗವಾಗಿ, "ಐರನ್ ವೀಲ್ಸ್ ಆಫ್ ಯೂನಿಟಿ ಸೈಕ್ಲಿಂಗ್" ಸುದೃಢ ಆರೋಗ್ಯ ಮತ್ತು ಪರಿಸರ ಪ್ರಜ್ಞೆಯನ್ನು, ಉತ್ತೇಜಿಸುವ ಗುರಿ ಹೊಂದಿದೆ.

<><><>

ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, 'ಫಿಟ್ ಇಂಡಿಯಾ' ಅಡಿ, ಸರ್ದಾರ್ ವಲ್ಲಭ ಭಾಯಿ ಪಟೇಲ ಅವರ, 150ನೇ ಜನ್ಮ ದಿನಾಚರಣೆ ಸ್ಮರಣಾರ್ಥ, ಈ ತಿಂಗಳ 31 ರಿಂದ "ಐರನ್ ವೀಲ್ಸ್ ಆಫ್ ಯೂನಿಟಿ" ಧ್ಯೇಯದ, ಎರಡು ರಾಷ್ಟ್ರವ್ಯಾಪಿ ಸೈಕ್ಲಿಂಗ್ ಯಾತ್ರೆಗಳನ್ನು ಆಯೋಜಿಸಲಿದೆ.

<><><>

ಈ ಕುರಿತು ಒಂದು ವರದಿ..

<><><>

*ಕಾಶ್ಮೀರ ದಿಂದ ಕನ್ಯಾಕುಮಾರಿ ವರೆಗೆ, 'ಕೆ2ಕೆ' ಸೈಕ್ಲಿಂಗ್ ಯಾತ್ರೆಗೆ, 31 ರಂದು ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿ ಚಾಲನೆ ನೀಡಲಾಗುತ್ತಿದೆ. ನವೆಂಬರ್ 16 ರಂದು, ತಮಿಳುನಾಡಿನ ಕನ್ಯಾಕುಮಾರಿಯಲ್ಲಿ, ಸೈಕಲ್ ಯಾತ್ರೆ ಮುಕ್ತಾಯವಾಗಲಿದೆ. ಒಟ್ಟು 150 ಸೈಕಲ್ ಪಟುಗಳು ಭಾಗವಹಿಸಿ, ಐಕ್ಯತೆಯ ಸಂದೇಶ ಸಾರಲಿದ್ದಾರೆ. 2023 ರ ಮೇ 17ರಂದು, ಮೌಂಟ್ ಎವರೆಸ್ಟ್ ಏರಿದ,*

*‘ಹವಾಮಾನ ಬದಲಾವಣೆಗೆ ಮುನ್ನ, ಬದಲಾಗಿ’ ಎಂಬ ಸಂದೇಶದೊಂದಿಗೆ, ಭಾರತದಿಂದ ಲಂಡನ್‌ಗೆ ಸೈಕಲ್‌ನಲ್ಲಿ ಪ್ರಯಾಣಿಸಿದ, ಪರ್ವತಾರೋಹಿ ನಿಶಾ ಕುಮಾರಿ, ‘ಕೆ2ಕೆ’ ಯಾತ್ರೆಯನ್ನು ಮುನ್ನಡೆಸಲಿದ್ದಾರೆ. ಮತ್ತೊಂದು ಯಾತ್ರೆ, ‘ಪೆಡಲ್ ಟು ಪ್ಲಾಂಟ್’ ಧ್ಯೇಯದೊಂದಿಗೆ, ಅರುಣಾಚಲ ಪ್ರದೇಶದ, ಪಂಗ್ಸೌದಿಂದ ಆರಂಭವಾಗಿ, ಡಿಸೆಂಬರ್ 31 ರಂದು, ಗುಜರಾತ್‌ನ ಮುಂದ್ರಾದಲ್ಲಿ ಕೊನೆಗೊಳ್ಳಲಿದೆ. 10 ಸಾವಿರ ಸಸಿ ನೆಡುವ ಗುರಿ ಹೊಂದಲಾಗಿದೆ. ಹುಬ್ಬಳ್ಳಿ ಬೈಸಿಕಲ್ ಕ್ಲಬ್ ಸದಸ್ಯರು, ‘ಫಿಟ್ ಇಂಡಿಯಾ, ಸಂಡೇಸ್ ಆನ್ ಸೈಕಲ್’ ಆಂದೋಲನದಲ್ಲಿ, ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.*

*ಕ್ಲಬ್ ಅಧ್ಯಕ್ಷ ಶೆಟ್ಟೆಪ್ಪ ಫಿರಂಗಿ ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.*

<><><>

ವಿವೇಕ (50) +ಶೆಟ್ಟೆಪ್ಪ ಫಿರಂಗಿ ಧ್ವನಿ (50) ಸೆಕೆಂದುಗಳು

<><><>

ಅತಿವೃಷ್ಟಿ ಹಾಗೂ ನೆರೆ ಪರಿಹಾರವಾಗಿ, ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಕ್ಕೆ, ರಾಜ್ಯ ವಿಕೋಪ ಪರಿಹಾರ ನಿಧಿ ಅಡಿ, ಕೇಂದ್ರ ಸರ್ಕಾರ, ಮುಂಗಡವಾಗಿ, ಎರಡನೇ ಕಂತಿನ, ಸಾವಿರದ 950 ಕೋಟಿ 80 ಲಕ್ಷ ರೂಪಾಯಿ, ಬಿಡುಗಡೆಗೆ ಅನುಮೋದಿಸಿದೆ. ಕೇಂದ್ರ ಗೃಹ ಖಾತೆ ಸಚಿವ ಅಮಿತ ಶಾಹ್, ಹೊಸ ದಿಲ್ಲಿಯಲ್ಲಿ ಪರಿಹಾರದ ಬಿಡುಗಡೆಗೆ ಅನುಮೋದಿಸಿ, ಕರ್ನಾಟಕಕ್ಕೆ 384 ಕೋಟಿ 40 ಲಕ್ಷ ರೂಪಾಯಿ ಮುಂಗಡ ಪರಿಹಾರ ಒದಗಿಸಿ, ಸಕಾಲದಲ್ಲಿ ನೆರವಿನ ಹಸ್ತ ಚಾಚಿದೆ, ಎಂದಿದ್ದಾರೆ.

<><><>

ಮುಂಗಾರು ಮಳೆಯ ತುರ್ತು ಪರಿಸ್ಥಿತಿಯಲ್ಲಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಗಳ, 199 ತಂಡಗಳು, ದೇಶದ 31 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ, ಮನನೀಯ ಕಾರ್ಯ ಮಾಡಿವೆ.

<><><>

ನಶಿಸುವ ಹಂತದಲ್ಲಿರುವ, ಕುಸುಬೆಯ ಉಳಿವಿಗಾಗಿ, ರೈತರು ಸಾವಯವ ಕೃಷಿ ಮೂಲಕ,ಪುನರುಜ್ಜೀವಿತ ಗೊಳಿಸುವಂತೆ, ಧಾರವಾಡ ತಾಲೂಕು, ಉಪ್ಪಿನ ಬೆಟಗೇರಿಯ, ಮೂರುಸಾವಿರ ವಿರಕ್ತಮಠದ, ಶ್ರೀ ಕುಮಾರ ವಿರುಪಾಕ್ಷ ಸ್ವಾಮೀಜಿ ಕರೆ ನೀಡಿದ್ದಾರೆ. ಜೀರಿಗಿವಾಡದ, ಧಾರವಾಡ ತಾಲೂಕು, ರೈತ ಉತ್ಪಾದಕರ ಕಂಪೆನಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ, 100 ಜನ ರೈತರಿಗೆ, ಎಣ್ಣೆ ಕಾಳು, ಕುಸುಬೆ ಬೀಜಗಳನ್ನು, ಉಚಿತವಾಗಿ ವಿತರಿಸಿ ಮಾತನಾಡಿದರು. ‘ಮೇಕ್ ಇನ್ ಇಂಡಿಯಾ’, ‘ನ್ಯಾಶನಲ್ ಮಿಷನ್ ಆನ್, ನ್ಯಾಚುರಲ್ ಫಾರ್ಮಿಂಗ್’ ಯೋಜನೆಗಳಡಿ, ಪ್ರಧಾನಮಂತ್ರಿಯವರು, ರಾಸಾಯನಿಕ ಮುಕ್ತ ನೈಸರ್ಗಿಕ ಕೃಷಿ ಪ್ರೋತ್ಸಾಹಿಸಲು, ಪ್ರತಿ ಎಕರೆಗೆ, 4 ಸಾವಿರ ರೂಪಾಯಿ ಪ್ರೋತ್ಸಾಹ ಧನ ನೀಡುತ್ತಿದ್ದಾರೆ, ಎಂದರು.

<><><>

ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ಯಮಗಳ, ನಿಯಮಬದ್ಧಗೊಳಿಸುವಿಕೆ ಯೋಜನೆ, ಧಾರವಾಡ ಜಿಲ್ಲೆ, ಸಂಪನ್ಮೂಲ ವ್ಯಕ್ತಿ, ಗಿರೀಶಕುಮಾರ ಬುಡರಕಟ್ಟಿಮಠ ಮಾತನಾಡಿ, ಶೇಕಡ 50 ರಷ್ಟು ಸಬ್ಸಿಡಿ ಪಡೆದು, ತಮ್ಮ ಉತ್ಪನ್ನಗಳ ಮೌಲವರ್ಧನೆ ಹಾಗೂ ಅಗ್ರಿಕಲ್ಚರ್ ಇನ್‌ಫ್ರಾಸ್ಟ್ರಕ್ಚರ್ ಫಂಡ್ ಯೋಜನೆ ಮೂಲಕ, ರೈತರಿಗೆ ಶೇಕಡ 3ರ ಬಡ್ಡಿ ದರದಲ್ಲಿ, ರಿಯಾಯಿತಿ ಸಾಲ ಲಭಿಸಲಿದೆ ಎಂದರು. 25ಕ್ಕೂ ಹೆಚ್ಚು ರೈತ ಉತ್ಪಾದಕರ ಕಂಪೆನಿಗಳ ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

<><><>

ಈಗ ವಾಣಿಜ್ಯ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(30 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

ಕೀಟ ನಾಶಕಗಳ ಮಿತಿ ಮೀರಿದ ಬಳಕೆಯಿಂದ, ಮಣ್ಣಿನ ಫಲವತ್ತತೆ ಕಡಿಮೆಯಾಗಿ, ಇಳುವರಿ ಕುಂಠಿತ ಗೊಳ್ಳುತ್ತದೆ; ಹೀಗಾಗಿ ಸಹಜ ಕೃಷಿಗೆ ಒತ್ತು ನೀಡಲು, ಭಾರತೀಯ ಕೃಷಿ ಅನುಸಂಧಾನ ಪರಿಷತ್ ನ, ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಕೇಂದ್ರ, ರೈತರಿಗೆ ಬಲ ತುಂಬುತ್ತಿದೆ ಎಂದು, ಕೇಂದ್ರದ ಭಾರೀ ಕೈಗಾರಿಕೆಗಳ ಖಾತೆ ಸಚಿವ, ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಬೆಂಗಳೂರಿನಲ್ಲಿ ಆಯೋಜಿತ, ಮೂರನೇ ಕೃಷಿ ಕೀಟ ಜೈವಿಕ ನಿಯಂತ್ರಣ ಪ್ರದರ್ಶನ ಹಾಗೂ ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಘಟಕದ, 33ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ, ಮಾತನಾಡಿದರು.

<><><>

ಕೇಂದ್ರದ ಸಣ್ಣ, ಸೂಕ್ಷ್ಮ ಹಾಗೂ ಮಧ್ಯಮ ಕೈಗಾರಿಕೆಗಳ ಖಾತೆ, ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ, ಮಾತನಾಡಿ, ಹಿರಿಯ ಪೀಳಿಗೆಯ ಕೃಷಿಕರು, ರೈತ ಮಿತ್ರ ಕೀಟಗಳ ಬಗ್ಗೆ ಹೊಂದಿರುವ ಮಾಹಿತಿಯನ್ನು, ಯುವ ರೈತರೊಂದಿಗೆ ಹಂಚಿಕೊಳ್ಳಬೇಕು, ಎಂದರು.

<><><>

ಬೆಂಗಳೂರು ಗ್ರಾಮಾಂತರ ಸಂಸದ, ಸಿ.ಎನ್.ಮಂಜುನಾಥ ಮಾತನಾಡಿ, ಸಾವಯವ ಕೃಷಿ ಪದ್ಧತಿಯಿಂದ, ಅನೇಕ ರೋಗಗಳನ್ನು ತಡೆಗಟ್ಟಿ, ಆರೋಗ್ಯವರ್ಧಕ ತಳಿಗಳನ್ನು ಮುನ್ನೆಲೆಗೆ ತರಬಹುದು, ಎಂದರು.

<><><>

ಇಂದು ನರಕ ಚತುರ್ದಶಿ. ಕಾರ್ತಿಕ ಮಾಸದ, ಕೃ ್ಣ ಪಕ್ಷದ, ಚತುರ್ದಶಿ. 5 ದಿನಗಳ ಕಾಲ ಆಚರಿಸುವ, ದೀಪಾವಳಿ ಹಬ್ಬದ ಎರಡನೇ ದಿನ, ನರಕ ಚತುರ್ದಶಿಯನ್ನು, ಆಚರಿಸಲಾಗುತ್ತದೆ. ದೀಪಗಳ ಮಹಾ ಹಬ್ಬ, ದೀಪಾವಳಿಯ ಭಾಗವಾಗಿ, ನರಕ ಚತುರ್ದಶಿಯನ್ನು ದೇಶದ ಪ್ರತಿಯೊಂದು ಭಾಗದಲ್ಲೂ, ಉತ್ಸಾಹ ಮತ್ತು ಸಮರ್ಪಣೆಯೊಂದಿಗೆ ಆಚರಿಸಲಾಗುತ್ತದೆ. ದೀಪ ದಾನ, ಅಥವಾ ಮಣ್ಣಿನ ಹಣತೆಗಳನ್ನು ದಾನ ಮಾಡುವ ವಿಶಿಷ್ಟ ಪದ್ಧತಿ ಇದೆ.

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ ಸೇರಿದಂತೆ, ಗಣ್ಯರು ನಾಡಿನ ಜನತೆಗೆ, ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯ ಕೋರಿದ್ದಾರೆ.

<><><>

ಪ್ರದೇಶ ಸಮಾಚಾರಕ್ಕಾಗಿ, ಜನಪದರ ವಿಶಿಷ್ಟ ದೀಪಾವಳಿ ಆಚರಣೆ ಕುರಿತು, ಮಾಹಿತಿ ನೀಡಿದ್ದಾರೆ, ಹಿರಿಯ ಜಾನಪದ ವಿದ್ವಾಂಸ, ಹುಬ್ಬಳ್ಳಿಯ ರಾಮಣ್ಣ ಮೂಲಗಿ.

<><><>

ಡಾ. ರಾಮಣ್ಣ ಮೂಲಗಿ ಧ್ವನಿ (45) ಸೆಕೆಂದುಗಳು

<><><>

ದೀಪಾವಳಿ ಹಬ್ಬದ ಸಂದರ್ಭದಲ್ಲಿ, ರಾತ್ರಿ 8 ರಿಂದ 10 ಗಂಟೆಯ ವರೆಗೆ ಮಾತ್ರ, ಹಿರಿಯರ ಮಾರ್ಗದರ್ಶನದಲ್ಲಿ ಮಕ್ಕಳು, ಹಸಿರು ಪಟಾಕಿಗಳನ್ನು ಸಿಡಿಸುವಂತೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮನವಿ ಮಾಡಿದೆ.

<><><>

ಕಣ್ಣಿಗೆ ಹಾನಿಯಾಗದಂತೆ, ಮುನ್ನೆಚ್ಚರಿಕೆ ಹಾಗೂ ದಿನದ 24 ಗಂಟೆ ತುರ್ತು ಸಂದರ್ಭಗಳಲ್ಲಿ, ತಜ್ಞ ವೈದ್ಯರು ಕಣ್ಣಿನ ಆಸ್ಪತ್ರೆಗಳಲ್ಲಿ ಲಭ್ಯ ಎಂದು, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದೆ.

<><><>

ಪಟಾಕಿ ಸಿಡಿಸುವ ವೇಳೆ, ಹತ್ತಿಯ ಉಡುಪು ಧರಿಸುವಂತೆ, ಕನಿಷ್ಟ 2 ರಿಂದ 3 ಅಡಿ ದೂರದಿಂದ ಪಟಾಕಿ ಹಚ್ಚುವಂತೆ, ಪಟಾಕಿಗಳ ಮೇಲೆ ನಮೂದಿಸಿದ ಸೂಚನೆ ಪಾಲಿಸುವಂತೆ, ಮೈದಾನ ಅಥವಾ ಖಾಲಿ ಸ್ಥಳಗಳಲ್ಲಿ ಪಟಾಕಿ ಸಿಡಿಸುವಂತೆ, ಕೋರಿದೆ.

<><><>

ಮಕ್ಕಳು ಪಟಾಕಿ ಸಿಡಿಸುವಾಗ ಅವಘಡ ಸಂಭವಿಸಿದರೆ, ಕೈಗೊಳ್ಳಬೇಕಾದ ಪ್ರಾಥಮಿಕ ಚಿಕಿತ್ಸೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹುಬ್ಬಳ್ಳಿಯ ಡಾಕ್ಟರ್ ಎಂ.ಎಂ.ಜೋಶಿ ಕಣ್ಣಿನ ಆಸ್ಪತ್ರೆಯ, ಚಿಕ್ಕ ಮಕ್ಕಳ ಕಣ್ಣುಗಳ, ತಜ್ಞ ವೈದ್ಯೆ, ಡಾಕ್ಟರ್ ದೀಪ್ತಿ ಜೋಶಿ.

<><><>

ಡಾಕ್ಟರ್ ದೀಪ್ತಿ ಜೋಶಿ ಧ್ವನಿ (50) ಸೆಕೆಂದುಗಳು

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಸುದೃಢ ಆರೋಗ್ಯ ಹಾಗೂ ಪರಿಸರ ಜಾಗೃತಿ ಗುರಿಯೊಂದಿಗೆ, ಫಿಟ್ ಇಂಡಿಯಾ, ಸಂಡೇಸ್ ಆನ್ ಸೈಕಲ್, ಅಭಿಯಾನ.
- ಇಂದು ನರಕ ಚತುರ್ದಶಿ; ದೀಪಾವಳಿ ಸಂಭ್ರಮಾಚರಣೆಗೆ ಭರದ ಸಿದ್ಧತೆ; ಪಟಾಕಿ ಹಾರಿಸುವಾಗ, ಮುನ್ನೆಚ್ಚರಿಕೆಗೆ ಮನವಿ.
- ರಾಜ್ಯಕ್ಕೆ, 384 ಕೋಟಿ 40 ಲಕ್ಷ ರೂಪಾಯಿ, ಕೇಂದ್ರದಿಂದ, ಮುಂಗಡ ಬೆಳೆ ನಷ್ಟ ಪರಿಹಾರ.
- ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಕೇಂದ್ರದಿಂದ, ಸಾವಯವ ಕೃಷಿಗೆ ಒತ್ತು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>